# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾನಿಲಯ,

# ವಿಜಯಪುರ.

## ಕನ್ನಡ ಅಧ್ಯಯನ ವಿಭಾಗ

ಪಿಹೆಚ್.ಡಿ ಅಧ್ಯಯನ ವಿಷಯ

## ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ

**ಕ.ರಾ.ಅ.ಮ.ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಉದ್ದೇಶಿತ ಸಾರಲೇಖ.**


ಸಂಶೋಧನಾ ವಿದ್ಯಾರ್ಥಿನಿ

ತಾಯವ್ವ ಮಾಂಗ

ಕನ್ನಡ ಅಧ್ಯಾಯನ ವಿಭಾಗ,

ಕ.ರಾ.ಅ.ಮ.ವಿಶ್ವವಿದ್ಯಾಲಯ, ವಿಜಯಪುರ.

ಮಾರ್ಗದರ್ಶಕರು

**ಪ್ರೊ.ಮಹೇಶ ಚಿಂತಾಮಣಿ**

ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ಕ. ರಾ. ಅ .ಮ .ವಿ .ವಿ ,ವಿಜಯಪುರ.


**೨೦೨೧**

# ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ

## ಪರಿವಿಡಿ

ಅಧ್ಯಾಯನದ ಉದ್ದೇಶ ,ವ್ಯಾಪ್ತಿ , ಸ್ವರೂಪ ,ಮಹತ್ವ , ವಿಧಾನ ,ಮಿತಿಗಳು.

ಅಧ್ಯಾಯ: ೦೧. ಅನುವಾದ ಸಾಹಿತ್ಯ
ಅನುವಾದದ ಅರ್ಥ , ಸ್ವರೂಪ , ಪ್ರಯೋಜನ , ಉದ್ದೇಶಗಳು , ಅನುವಾದದ ಪ್ರಕಾರಗಳು.

ಅಧ್ಯಾಯ: ೦೨. ಕನ್ನಡ ಅನುವಾದ ಸಾಹಿತ್ಯ ಬೆಳೆದುಬಂದ ಇತಿಹಾಸ
೦೨.೧) ಕನ್ನಡ ಮಹಿಳಾ ಅನುವಾದ ಸಾಹಿತ್ಯದ ಇತಿಹಾಸ

ಅಧ್ಯಾಯ: ೦೩. ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ

ಆ)ಕನ್ನಡ ಭಾಷೆಗೆ ಅನುವಾದಗೊಂಡ ಪ್ರಾದೇಶೀಕ ಮತ್ತು ಅನ್ಯದೇಶೀಯ ಭಾಷೆಯ ಅನುವಾದ ಸಾಹಿತ್ಯ

೩.೧.ದೇಶೀಯ ಭಾಷೆಗಳ ಅನುವಾದ

೩.೧.೧ ಹಿಂದಿ

೩.೧.೨ ಮರಾಠಿ

೩.೧.೩ ತೆಲಗು

೩.೧.೪ ತಮಿಳು

೩.೧.೫ ಮಲಯಾಳಂ

೩.೧.೬ ಬೆಂಗಾಲಿ

೩.೧.೭ ಕೊಂಕಣಿ

೩.೨.ಅನ್ಯದೇಶೀಯ ಭಾಷೆಯ ಅನುವಾದ

೩.೨.೧ ಇಂಗ್ಲೀಷ

೩.೨.೨ ರಷ್ಯನ್

೩.೨.೩. ಚೀನಿ

೩.೨.೪. ತುರ್ಕಿ

೩.೩. ಅನುವಾದಿತ ಸಾಹಿತ್ಯ ಪ್ರಕಾರಗಳು

**೩.೩.೧** ಕಾವ್ಯ

**೩.೩.೨** ಕಥೆ

**೩.೩.೩** ಕಾದಂಬರಿ

**೩.೩.೪** ನಾಟಕ

**೩.೩.೫** ಜೀವನ ಚರಿತ್ರೆ

**೩.೩.೬** ಆತ್ಮಕಥೆ

ಅಧ್ಯಾಯ: **೦೪.** ಅನುವಾದಕಿಯರ ಜೀವನ ಮತ್ತು ಸಾಹಿತ್ಯ ಪರಿಚಯ

- ಸಮಾರೋಪ
- ಗ್ರಂಥ ಋಣ

  ಅ) ಆಕರ ಗ್ರಂಥಗಳು

  ಆ) ಪರಾಮರ್ಶನ ಗ್ರಂಥಗಳು

## ❖ ಪ್ರವೇಶಿಕೆ:

ಹೊಸಗನ್ನಡ ಸಾಹಿತ್ಯದಲ್ಲಿ ಅನುವಾದ ಸಾಹಿತ್ಯ ಪ್ರಸ್ತುತ ವಿಸ್ತಾರವಾಗಿ ಬೆಳೆದುನಿಂತಿದೆ. ಅನುವಾದ ಎನ್ನುವಂತಹದ್ದು ಸಾಹಿತ್ಯ ಮತ್ತು ಸಾಹಿತ್ಯೇತ್ತರ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬೆಳೆದುನಿಂತಿದೆ. ಕನ್ನಡ ಸಾಹಿತ್ಯಕ್ಕೆ ಭಾಷೆಯ ಕೊಡುಕೊಳ್ಳುವಿಕೆ ಪ್ರಾಚೀನದಿಂದ ಪ್ರಸ್ತುತದವರೆಗೆ ಒಂದಿಲ್ಲಾ ಒಂದು ರೂಪದಲ್ಲಿ ನಡೆಯುತ್ತಾ ಬಂದಿದೆ. ಪ್ರಾಚೀನ ಮತ್ತು ನಡುಗನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆ ಸಾಹಿತ್ಯವನ್ನು ಎರವಲಾಗಿ ಪಡೆಯುವ ಕಾರ್ಯ ಯತೇಚ್ಛವಾಗಿದ್ದರೆ ಆಧುನಿಕ ಸಾಹಿತ್ಯದಲ್ಲಿ ಪ್ರಾದೇಶಿಕದೊಂದಿಗೆ ಜಾಗತಿಕ ಭಾಷೆಯಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಆ ಭಾಷೆಗಳಿಗೆ ಕೊಡುಕೊಳ್ಳುವಿಕೆ ಕಾರ್ಯ ನಡೆಯುತ್ತಿದೆ. ಈ ಮೂಲಕ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯುತ್ತಿದೆ. ಈ ಸಾಹಿತ್ಯದ ಬೆಳವಣಿಗೆಗೆ ಲೇಖಕಿಯರ ಪಾತ್ರವೂ ಪ್ರಮುಖವಾಗಿದೆ.

## ❖ ಉದ್ದೇಶ:

ಕನ್ನಡ ಅನುವಾದ ಸಾಹಿತ್ಯವನ್ನು ಅವಲೋಕಿಸುವುದು. ಅದರಲ್ಲೂ ವಿಶೇಷವಾಗಿ ಲೇಖಕಿಯರ ಅನುವಾದ ಸಾಹಿತ್ಯವನ್ನು ಗಮನದಲ್ಲಿಯಿಟ್ಟುಕೊಂಡು ವಿಶ್ಲೇಷಿಸುವುದು. ಹೊಸಗನ್ನಡ ಸಾಹಿತ್ಯದಲ್ಲಿ ಅನುವಾದ ಸಾಹಿತ್ಯ ಪ್ರಮುಖ ಕ್ಷೇತ್ರವಾಗಿ ಪ್ರಭಾವವನ್ನುಂಟು ಮಾಡಿದೆ. ಈ ಕ್ಷೇತ್ರಕ್ಕೆ ಲೇಖಕಿಯರ ಕೊಡುಗೆ ಅಪಾರವಾಗಿದೆ. ಸಾಹಿತ್ಯದ ಅನೇಕ ರೂಪಗಳಲ್ಲಿ ಅನುವಾದ ಕಾರ್ಯವನ್ನು ನಿರ್ವಹಿಸಿದ್ದಾರೆ. ಜೊತೆಗೆ ಪ್ರಾದೇಶಿಕ ಮತ್ತು ಅನ್ಯದೇಶಿಯ ಭಾಷೆಯ ಅನುವಾದ ಕಾರ್ಯವನ್ನು ಪರಿಚಯಿಸುವುದು ನನ್ನ ಅಧ್ಯಾಯನದ ಉದ್ದೇಶವಾಗಿದೆ.

## ❖ ವ್ಯಾಪ್ತಿ:

ಕನ್ನಡ ಅನುವಾದ ಸಾಹಿತ್ಯದಲ್ಲಿ ವಿಶೇಷವಾಗಿ ಲೇಖಕಿಯರ ಅನುವಾದ ಸಾಹಿತ್ಯಕ್ಕೆ ಸೀಮಿತವಾಗಿದೆ. ಸಾಹಿತ್ಯದ ಕೆಲವು ರೂಪಗಳಲ್ಲಿ ನಡೆದ ಅನುವಾದ ಕಾರ್ಯವನ್ನು ಪರಿಚಯಿಸುವುದು. ನಿರ್ದಿಷ್ಟ ಪ್ರಾದೇಶಿಕ ಮತ್ತು ಅನ್ಯದೇಶಿಯ ಭಾಷೆಯ ಲೇಖಕಿಯರ ಅನುವಾದ ಕಾರ್ಯವನ್ನು ತಿಳಿಯಪಡಿಸುವುದು. ಜೊತೆಗೆ ಪ್ರಮುಖ ಅನುವಾದಕಿಯರ ಜೀವನ ಮತ್ತು ಸಾಹಿತ್ಯವನ್ನು ಅಧ್ಯಾಯನಕ್ಕೆ ಒಳಪಡಿಸಲಾಗುವುದು.

## ❖ ಸ್ವರೂಪ:

ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಲೇಖಕಿಯರು ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಅನುವಾದ ಸಾಹಿತ್ಯಕ್ಕೆ ಲೇಖಕರಷ್ಟೇ ಸಮಪಾಲು ಸೇವೆ ಲೇಖಕಿಯರು ಮಾಡಿದ್ದಾರೆ ಎಂಬುದನ್ನು ತಿಳಿಯಪಡಿಸುವುದು. ಲೇಖಕಿಯರು ಅನೇಕ ದೇಶಿಯ ಮತ್ತು ಅನ್ಯದೇಶಿಯ ಹಲವು ಸಾಹಿತ್ಯ ರೂಪಗಳಲ್ಲಿ ತಮ್ಮ ಸಾಹಿತ್ಯ ಕೃಷಿಯನ್ನು ಗೈದಿದ್ದಾರೆ. ಆ ಸಾಹಿತ್ಯವನ್ನು ವಿಶ್ಲೇಷಣೆಗೆ ಒಳಪಡಿಸುವ ಆಶಯವನ್ನು ಹೊಂದಿದೆ.

❖ **ವಿಧಾನ :**

ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ ಅಧ್ಯಯನವನ್ನು ಸಾಮಗ್ರಿಮುಖಿಯ ಹಾಗೂ ವಿಶ್ಲೇಷಣಾತ್ಮಕ ವಿಮರ್ಶಕ ವಿಧಾನವನ್ನು ಬಳಸಲಾಗುವುದು. ಫಲಿತಗಳನ್ನು ವಿವರಣೆ ಮತ್ತು ವ್ಯಾಖ್ಯಾನ ಮಾದರಿಯಲ್ಲಿ ನಿರೂಪಿಸಲಾಗುವುದು.

❖ **ಮಿತಿಗಳು**

ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ ಆಧರಿಸಿದ ಅಧ್ಯಯನ ತನ್ನದೇ ಆದ ಮಿತಿಗಳನ್ನು ಹೊಂದಿದೆ. ಲೇಖಕಿಯರ ಸೀಮಿತ ಪ್ರಾದೇಶಿಕ ಮತ್ತು ಅನ್ಯದೇಶೀಯ ಭಾಷೆಯ ಸಾಹಿತ್ಯದ ಅಧ್ಯಯನವಾಗಿದೆ. ಜೊತೆಗೆ ನಿರ್ದಿಷ್ಟ ಸಾಹಿತ್ಯ ರೂಪಗಳಲ್ಲಿ ನಡೆದ ಅನುವಾದ ಕಾರ್ಯಗಳ ಅಧ್ಯಯನವಾಗಿದೆ.

❖ **ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ :**

ಕನ್ನಡದಲ್ಲಿ ಅನುವಾದ ಸಾಹಿತ್ಯ ೧೯೨೦ ರ ವರೆಗೆ –ಎ.ಆರ್. ಮಂಜುನಾಥ ,ಕ.ವಿ.ವಿ.ಹಂಪಿ,೨೦೦೦

.

## ಅಧ್ಯಾಯ : ೦೧. ಅನುವಾದ ಸಾಹಿತ್ಯ

### ೧.೧ . ಅರ್ಥ:

ಅನುವಾದ ಮತ್ತು ಭಾಷಾಂತರ ಎನ್ನುವ ಪದ ಸಮನಾರ್ಥಕ ಪದವಾಗಿ ಸಾಹಿತ್ಯದಲ್ಲಿ ಬಳಕೆಯಾಗುತ್ತವೆ. ಒಂದು ಭಾಷೆಯ ಮತ್ತು ಬರವಣಿಗೆಯನ್ನು ಇನ್ನೊಂದು ಭಾಷೆಯಲ್ಲಿ ಸಮಾನ ಅರ್ಥ ನೀಡುವಂತೆ ಪರಿವರ್ತಿಸುವ ಒಂದು ಪ್ರಕ್ರಿಯೆಯನ್ನು ಅನುವಾದ ಎನ್ನುವರು. ಈ ಕಾರ್ಯವನ್ನು ಕನ್ನಡದಲ್ಲಿ ತರ್ಜುಮೆ, ಕನ್ನಡೀಕರಿಸುವಿಕೆ ,ಮರುಬರವಣಿಗೆ, ರೂಪಾಂತರ , ಅಳವಡಿಕೆ ಇತ್ಯಾದಿಯಾಗಿ ಬಳಸಲಾಗುತ್ತದೆ. ವಿಶಾಲಾರ್ಥದಲ್ಲಿ ಎಲ್ಲಾ ಬಗೆಯ ಭಾಷಿಕ ಚಟುವಟಿಕೆಗಳು ಭಾಷಾಂತರಗಳೇ ಆಗಿವೆ. ಜೊತೆಗೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಒಂದು ಹಂತದ ಇಲ್ಲವೇ ಕಾಲದ ಭಾಷೆಯಿಂದ ಇನ್ನೊಂದು ಹಂತದ ಅಥಾವ ಕಾಲದ ಅದೇ ಭಾಷೆಗೆ ಮಾನಸಿಕವಾಗಿ , ಮೌಖಿಕವಾಗಿ ಅಥವಾ ಬರಹ ರೂಪದಲ್ಲಿ ಮೂಲದ ಅರ್ಥ ಭಾವಗಳನ್ನು ಕೊಂಡೊಯ್ಯುವ ಕ್ರಿಯೆಯನ್ನು ಅನುವಾದ ಎನ್ನಲಾಗುತ್ತದೆ.

### ೧.೨. ಸ್ವರೂಪ

ಅನುವಾದ ಎನ್ನುವಂತಹದು ಹುಟ್ಟಿಕೊಳ್ಳುವುದೇ ವಸಾಹಾತುಶಾಹಿ ಸಂಸ್ಕೃತಿಯ ಕಾರಣಕ್ಕೆ ಯುರೋಪಿನ ಬಲಿಷ್ಠ ರಾಷ್ಟ್ರಗಳು ತಮ್ಮ ವಸಹಾತು ಪ್ರದೇಶಗಳ ಮೇಲೆ ಆಡಳಿತ ನಡೆಸಲು ಸ್ಥಳೀಯ ಭಾಷೆಯನ್ನು ಕಲಿತು ಭಾಷಾಂತರ

ಕಾರ್ಯದಲ್ಲಿ ತೊಡಗಿದರು. ಈ ಕಾರ್ಯದ ಪ್ರಮುಖ ಉದ್ದೇಶ ಅಡಳಿತ ಮತ್ತು ಮತಾಂತರವಾಗಿತ್ತು. ಇದು ಮುಂದುವರೆದು ಜಾಗತಿಕ ಮಟ್ಟದ ಅನುವಾದಕ್ಕೆ ಕಾರಣವಾಯಿತು. ಪ್ರಸ್ತುತ ನಿರ್ದಿಷ್ಟ ಅಧ್ಯಯನ ಚೌಕಟ್ಟಾಗಿ ಬೆಳೆದುನಿಂತಿದೆ. ಕನ್ನಡದಲ್ಲಿ ಪ್ರಾರಂಭಿಕ ಸಾಹಿತ್ಯ ನೇರ ಭಾಷಾಂತರವಾಗಿರಲಿಲ್ಲ. ಸಂಸ್ಕೃತ , ಪ್ರಾಕೃತ ಭಾಷೆಯ ರೂಪಾಂತರವಾಗಿದ್ದವು. ಹಳಗನ್ನಡ ಮತ್ತು ನಡುಗನ್ನಡದಲ್ಲಿ ಸೃಜನಶೀಲ ರೂಪಾಂತರಗಳು ಹೆಚ್ಚಾಗಿ ಬೆಳೆದುಬಂದವು. ಹೊಸಗನ್ನಡ ಕಾಲ ಸಂದರ್ಭದಲ್ಲಿ ಅನುವಾದ ನಿರ್ದಿಷ್ಟ ಆಯಾಮದೊಂದಿಗೆ ಮುಂದುವರೆಯುತ್ತದೆ. ಇಂದು ಪ್ರತ್ಯೇಕ ಶಾಖೆಯಾಗಿ ವಿಸ್ತಾರವಾಗಿ ಬೆಳೆದು ನಿಂತಿದೆ.ಅನುವಾದದ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ.

ಮಾಲ್ಕಮ್ ಕೌಲೆ : “ಭಿನ್ನ ಹಿನ್ನೆಲೆಯ ಓದುಗರಿಗಾಗಿ ಬೇರೊಂದು ಕೃತಿಯನ್ನು ಪುನರಸೃಷ್ಟಿಸುವ ಕಲೆಯೇ ಭಾಷಾಂತರ”.

ಇ.ಎಸ್.ಚೇಟ್ : “ಭಾಷಾಂತರ ಇಲ್ಲದೆ ಯಾವ ಚಟುವಟಿಕೆಯು ಮುನ್ನಡಿಯಲಾರದು”.

ಕ್ಯಾಟ್ ಪೋರ್ಡ : “ಒಂದು ಭಾಷೆಯಲ್ಲಿಯ ಪಠ್ಯವಸ್ತುವಿಗೆ ಬದಲಾಗಿ ಇನ್ನೊಂದು ಭಾಷೆಯ ಸಮಾನ ಪಠ್ಯವಸ್ತುವನ್ನು ಹಾಕುವ ಪ್ರಕ್ರಿಯೆ ಭಾಷಾಂತರ”.

ಸಿ.ಎನ್.ರಾಮಚಂದ್ರ : “ಭಾಷಾಂತರ ಎಂದರೆ ಎರಡು ಭಾಷೆಗಳನ್ನು ಎರಡು ಭಾಷಿಕ ಸಮೂಹಗಳನ್ನು ಎರಡು ಸಂಸ್ಕೃತಿಗಳನ್ನು ಒಂದುಗೂಡಿಸುವ ಮಹತ್ವಪೂರ್ಣ ಸಾಂಸ್ಕೃತಿಕ ಕ್ರಿಯೆ”.

## ೧.೩. ಪ್ರಯೋಜನ

“ಆಂಗ್ಲ ಸಾಹಿತ್ಯದ ವಿದ್ಯಾರ್ಥಿ ವಿಶ್ವ ಸಾಹಿತ್ಯದ ವಿದ್ಯಾರ್ಥಿ ” ಎನ್ನುವ ಹೇಳಿಕೆಯೊಂದಿದೆ. ಕನ್ನಡ ಸಾಹಿತ್ಯದಲ್ಲಿಯು ಇಂತಹ ಸಂಚಲನವನ್ನು ಉಂಟುಮಾಡುವಲ್ಲಿ ಅನುವಾದ ಪ್ರಮುಖ ಪಾತ್ರನಿರ್ವಹಿಸುತ್ತದೆ. ಅನುವಾದ ತೌಲನಿಕ ವಿಮರ್ಶೆಗೆ ಅವಕಾಶ ಉಂಟುಮಾಡುತ್ತದೆ. ಜಾಗತಿಕ ಮತ್ತು ಪ್ರಾದೇಶಿಕ ಭಿನ್ನತೆ, ವೈಶಿಷ್ಟ್ಯತೆ ಅರಿಯಲು ಸಹಾಯಕವಾಗುತ್ತದೆ. ಓದುಗನ ಭೌತಿಕ ಮಟ್ಟವನ್ನು ವಿಸ್ತಾರಗೊಳಿಸುತ್ತದೆ. ಇತರ ಪ್ರಾದೇಶಿಕ, ಅನ್ಯದೇಶೀಯ ಭಾಷೆ ಅರಿಯದವರು ಸ್ಥಳೀಯ ಭಾಷೆಯಲ್ಲಿ ಆ ಸಾಹಿತ್ಯವನ್ನು ಗ್ರಹಿಸಬಹುದು. ಆದ್ದರಿಂದ ಅನುವಾದ ಬಹುಮುಖಿ ಆಯಾಮಗಳಲ್ಲಿ ಉಪಯುಕ್ತವಾಗಿದೆ.

## ೧.೪. ಉದ್ದೇಶ

ಒಂದು ಭಾಷೆಯ ಸಾಹಿತ್ಯವನ್ನು ಮತ್ತೊಂದು ಭಾಷೆಯ ಸಾಹಿತ್ಯವಾಗಿಸುವ ಸೃಜನಶೀಲ ಕುಶಲತೆಯು ಅನುವಾದ ಎನಿಸುತ್ತದೆ. ಇದು ಭಾಷಿಕ ಪರಿಸರಕ್ಕೆ ಮಾತ್ರ ಸೀಮಿತವಾಗಿಲ್ಲ. ಅದು ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಗತಿಗಳನ್ನು ತಿಳಿಯಪಡಿಸುತ್ತದೆ. ಕಾಲ ಸಂದರ್ಭಕ್ಕೆ ತಕ್ಕಂತೆ ಬದಲಾವಣೆಗೆ ಹೊಂದಿಕೊಳ್ಳುವಂತೆ ಹೊಸ

ಸಾಹಿತ್ಯ ಪ್ರಕಾರಗಳು, ಸಾಹಿತ್ಯ ಪರಿಭಾಷೆಗಳನ್ನು ಹುಟ್ಟುಹಾಕುತ್ತದೆ. ಸ್ವತಂತ್ರ ಸಾಹಿತ್ಯದ ಸೃಷ್ಠಗೆ ಮೂಲ ಬೇರಾಗಿ ಕಾರ್ಯನಿರ್ವಹಿಸುತ್ತದೆ. ಡಿ.ವಿ.ಜಿ.ಯವರು ಹೇಳುವಂತೆ "ಸ್ವತಂತ್ರ ಕಾವ್ಯದ ಪೈರು ಹುಟ್ಟುವುದಕ್ಕೆ ಮೊದಲು ನಡೆದಿರಬೇಕಾದ ಉಳುಮೆಯ ಕೆಲಸವೇ ತರ್ಜುಮೆ" ಎನ್ನುತ್ತಾರೆ.

### ೧.೫. ಪ್ರಕಾರಗಳು

ಅನುವಾದದಲ್ಲಿ ಪ್ರಮುಖವಾಗಿ ಏಂಟು ಪ್ರಕಾರಗಳನ್ನು ಗುರುತಿಸಲಾಗುತ್ತದೆ. ಅವು ಈ ರೀತಿಯಾಗಿವೆ. ಶಬ್ದಾನುವಾದ ಮೂಲದ ಶಬ್ದಕ್ಕೆ ಬದಲಾಗಿ ಶಬ್ದವನ್ನು ಇಟ್ಟುಕೊಂಡು ಹೋಗುವ ಕ್ರಿಯೆಯಾಗಿದೆ. ವಿಸ್ತಾರಾನುವಾದ ಇದು ಮೂಲ ಕೃತಿಗೆ ಭಾವಸ್ಪಷ್ಟನೆ , ಸಂವರ್ಧನೆ, ಪೋಷಣೆಗಳ ದೃಷ್ಠಯಿಂದ ಸೇರಿಸಲಾಗುವ ಒಂದೆರಡು ವಾಕ್ಯಗಳ ಕ್ರಿಯೆಯಾಗಿದೆ. ಇದು ನಾಲ್ಕು ಬಗೆಯಲ್ಲಿ ನಡೆಯುತ್ತದೆ. ಶಬ್ದವಿಸ್ತಾರ , ಭಾವವಿಸ್ತಾರ, ವ್ಯಾಖ್ಯಾನ, ಪ್ರಕ್ಷೇಪಗಳ ಮೂಲಕ ನಡೆಯುತ್ತದೆ. ನಿಕಟಾನುವಾದ ಎಂದರೆ ವಸ್ತು, ರೀತಿ ಮತ್ತು ಶೈಲಿಯ ದೃಷ್ಠಯಿಂದ ಮೂಲಕ್ಕೆ ಆದಷ್ಟು ನಿಕಟವಾಗಿರುವ ಬಹುಮಟ್ಟಿಗೆ ಮೂಲಕ್ಕೆ ಯಾವುದನ್ನು ಸೇರಿಸದೆ ಏನನ್ನೂ ಕೈಬಿಡದೆ ಮೂಲದ ಹಾದಿಯಲ್ಲಿ ಇರುವುದಾಗಿದೆ. ಭಾವಾನುವಾದ ಇಲ್ಲಿ ಕೃತಿಯ ಮೂಲದ ಭಾವಕ್ಕೆ ಋಣಿಯಾಗಿರುವುದು ಮುಖ್ಯವಾಗಿರುತ್ತದೆ. ಪ್ರಸ್ತುತ ಪ್ರಾದೇಶಿಕತೆಗೆ ಅನುಗುಣವಾಗಿ ಭಾವವನ್ನು ವ್ಯತ್ಯಾಸಗೊಳಿಸಲಾಗುತ್ತದೆ. ಸಂಗ್ರಹಾನುವಾದ ಎಂದರೆ ಮಹತ್ವದ ಕೃತಿಗಳನ್ನು ಗುಣಕ್ಕಾಗಲಿ, ಗಾತ್ರಕ್ಕಾಗಲಿ ಲೋಪಬರದಂತೆ ಸ್ವಾರಸ್ಯ ಉಳಿದು ಬರುವಂತೆ ಸಂಗ್ರಹಿಕೊಡುವಂತೆ ಅನುವಾದ ಮಾಡುವ ವಿಧಾನವಾಗಿದೆ. ರೂಪಾಂತರ ಅನ್ನುವುದು ದೇಶಕಾಲಗಳಿಗೆ ಸಂಬಂಧಿಸಿದಂತೆ ಮೂಲ ಕೃತಿಯನ್ನು ಮತ್ತೊಂದು ಭಾಷೆಗೆ ಅಳವಡಿಸಿಕೊಳ್ಳುವುದಾಗಿದೆ. ಸರಳಾನುವಾದ ಈ ಅನುವಾದ ವಿದಾರ್ಥಿಗಳು, ಜನಸಾಮಾನ್ಯರು, ಮಕ್ಕಳು ಇಂತಹ ವಿಶಿಷ್ಠ ವರ್ಗದ ಓದುಗರನ್ನು ದೃಷ್ಠಯಲ್ಲಿಯಿರಿಸಿಕೊಂಡು ಆದಷ್ಟು ಸರಳವಾದ ಭಾಷೆಯಲ್ಲಿ ನಡೆಯುವ ಕ್ರಿಯೆಯಾಗಿದೆ. ಇದು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಮುಖವಾಗಿದೆ. ಕೊನೆಯದಾಗಿ ಅರ್ಥಾನುವಾದ ಕೃತಿಯಧ್ವನಿ ಮತ್ತು ಆಶಯಗಳಿಗೆ ವಿಶೇಷವಾಗಿ ಗಮನ ಕೊಡದೆ ಮೂಲದ ಅರ್ಥವನ್ನು ಯಥಾವತ್ತಾಗಿ ರವಾನಿಸುವ ವಿಧಾನವಾಗಿದೆ. ಇವಿಷ್ಟು ಅನುವಾದದ ಪ್ರಕಾರಗಳಾಗಿವೆ.

## ಅಧ್ಯಾಯ – ೦೨. ಕನ್ನಡದಲ್ಲಿ ಅನುವಾದ ಸಾಹಿತ್ಯ ಬೆಳೆದುಬಂದ ಇತಿಹಾಸ

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಚರಿತ್ರೆ ಇತರ ಭಾಷೆಗಳಿಂದ ಭಾಷಾಂತರ, ರೂಪಾಂತರಗಳ ಮೂಲಕ ಬೆಳೆದು ಬಂದಿದೆ. ಪ್ರಾಚೀನ ಕಾಲದಲ್ಲಿ ಬೌದ್ಧರ ಮೂಲಕ ಪಾಲಿ ಸಾಹಿತ್ಯ, ಜೈನರ ಮೂಲಕ ಪ್ರಾಕೃತ ಸಾಹಿತ್ಯ, ಬ್ರಾಹ್ಮಣರ ಮೂಲಕ ಸಂಸ್ಕೃತ ಸಾಹಿತ್ಯ ಕನ್ನಡಕ್ಕೆ ಪ್ರೇರಣೆ ಪ್ರಭಾವಗಳ ಮೂಲಕ ಬೆಳೆದು ಬಂದಿದೆ. ಸಾಹಿತ್ಯದ ಮೊದಲ ಘಟ್ಟದಲ್ಲಿ ಸಂಸ್ಕೃತ, ಪ್ರಾಕೃತ ಕೃತಿಗಳ ಟೀಕೆ ವ್ಯಾಖ್ಯಾನ ನೇರ ಭಾಷಾಂತರ, ಸೃಜನಶೀಲ ಭಾಷಾಂತರಗಳು ಹುಟ್ಟಿಕೊಂಡವು. ಹೊಸಗನ್ನಡದಲ್ಲಿ ಕವಿತೆಗಳ ಅನುವಾದ ಮೂಲಕ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ಮಿಷನರಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ಕ್ಷೇತ್ರದಲ್ಲಿ ಹಟ್ಟಿಯಂಗಡಿ ನಾರಾಯಣ, ಎಸ್.ಜಿ. ನರಸಿಂಹಾಚಾರ್ಯ, ಪಂಜೆಮಂಗೇಶರಾಯ, ಗೋವಿಂದ ಪೈ, ಬಿ.ಎಂ.ಶ್ರೀ ಪ್ರಮುಖರಾಗಿದ್ದಾರೆ. ಅದೇ ರೀತಿಯಾಗಿ ಮಹಿಳಾ ಅನುವಾದ ಸಾಹಿತ್ಯ ಸ್ವಾತಂತ್ರ್ಯ ಪೂರ್ವದಲ್ಲಿಯೇ ಇತರ ಭಾಷೆಯ ಪತ್ರಿಕೆಗಳ ಭಾಷಣ, ಲೇಖನಗಳ ಭಾಷಾಂತರಗಳ ಮೂಲಕ ಪ್ರಾರಂಭವಾಗುತ್ತದೆ. ನಂಜನಗೂಡು ತಿರುಮಲಾಂಬ ಮೊದಲ ಅನುವಾದಕಿಯಾಗಿ

ಗುರುತಿಸಿಕೊಳ್ಳುತ್ತಾರೆ. ಹೊಸಗನ್ನಡದಲ್ಲಿ ಎರಡು ನೂರಕ್ಕೂ ಅಧಿಕ ಲೇಖಕಿಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ವಿಶ್ವವಿದ್ಯಾಲಯಗಳ ಅಧ್ಯಾಯನ ಶಾಖೆಯಾಗಿ ಅಭ್ಯಾಸಿಸಲಾಗುತ್ತಿದೆ. ಅನೇಕ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ಅನುವಾದವನ್ನು ಪ್ರೋತ್ಸಾಹಿಸುವ ಬೆಳೆಸುವ ಕಾರ್ಯದಲ್ಲಿ ತೊಡಗಿಕೊಂಡಿವೆ.

## ಅಧ್ಯಾಯ – ೦೩. ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ

ಕನ್ನಡ ಅನುವಾದ ಕ್ಷೇತ್ರಕ್ಕೆ ಲೇಖಕಿಯರ ಕೊಡುಗೆ ಅಪಾರವಾಗಿದೆ. ಇವರ ಅನುವಾದ ಕಾರ್ಯವನ್ನು ಎರಡು ಭಾಗವಾಗಿ ವಿಂಗಡಿಸಲಾಗುತ್ತದೆ. ಕನ್ನಡದಿಂದ ಅನುವಾದಗೊಂಡ ದೇಶಿಯ ಮತ್ತು ಅನ್ಯದೇಶಿಯ ಸಾಹಿತ್ಯ ಮತ್ತು ಕನ್ನಡಕ್ಕೆ ಅನುವಾದಿಸಿದ ದೇಶಿಯ ಮತ್ತು ಅನ್ಯದೇಶಿಯ ಸಾಹಿತ್ಯ. ಅನುವಾದ ಕಾರ್ಯ ನಡೆಸಿದ ದೇಶಿಯ ಭಾಷೆಗಳು ಹಿಂದಿ, ಮರಾಠಿ, ತೆಲಗು, ತಮಿಳು, ಮಲೆಯಾಳಂ, ಬಂಗಾಲಿ, ಕೊಂಕಣಿ. ಅದರೊಂದಿಗೆ ಅನ್ಯದೇಶೀಯ ಭಾಷೆಗಳು ಇಂಗ್ಲೀಷ್, ಚೀನಿ, ತುರ್ಕಿ, ರಷ್ಯನ್; ಯುರೋಪಿಯನ ಭಾಷೆಗಳು. ಜೊತೆಗೆ ಸಾಹಿತ್ಯ ರೂಪಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಆತ್ಮಕಥೆ, ಜೀವನ ಚರಿತ್ರೆ ಪ್ರಕಾರಗಳಲ್ಲಿ ಅನುವಾದ ಕಾರ್ಯವನ್ನು ಕೈಗೊಂಡಿದ್ದಾರೆ. ಮೊದಲ ಅನುವಾದಕಿಯಾದ ನಂಜನಗೂಡು ತಿರುಮಲಾಂಬ ಇವರ ಅನುವಾದ ಕಾರ್ಯವನ್ನು ಡಾ. ವಿಜಯಾ ದಬ್ಬೆಯವರ 'ಹಿತೈಷಿಣಿಯ ಹೆಜ್ಜೆಗಳು' ಎಂಬ ಕೃತಿಯಲ್ಲಿ ಕಾಣಬಹುದು. ಆರ್.ಕಲ್ಯಾಣಮ್ಮ ಪತ್ರಿಕಾ ಅನುವಾದದೊಂದಿಗೆ ಸಾಹಿತ್ಯ ಅನುವಾದಕ್ಕೆ ತೊಡಗಿಕೊಳ್ಳುತ್ತಾರೆ. ಐದಕ್ಕೂ ಅಧಿಕ ಪ್ರಾದೇಶಕ ಭಾಷೆ ಬಲ್ಲವರಾಗಿದ್ದರು. ಪ್ರಾರಂಭಿಕ ಅನುವಾದಕಿಯರಲ್ಲಿ ಇವರ ಸಾಹಿತ್ಯ ಕೃಷಿ ಸಮೃದ್ಧವಾಗಿರುವುದು ಕಂಡುಬರುತ್ತದೆ. ತಿರುಮಲೆ ರಾಜಮ್ಮನವರು ದ್ವಿತಿಯ ಮೂಲಗಳ ಅನುವಾದ ಕಾರ್ಯದಲ್ಲಿ ತೊಡಗುತ್ತಾರೆ. ಸೀತಾದೇವಿ ಪಡಕೋಣೆಯವರು ಕೊಂಕಣಿ ಭಾಷೆಯಲ್ಲಿ ಹೆಚ್ಚು ತೊಡಗಿಕೊಂಡಿದ್ದರು. ಲೀಲಾವತಿ ಕಾಮತ್ ಇವರು ಪತ್ರಿಕೆಗಳಿಗೆ ಇತರ ಭಾಷೆಗೆ ಸಣ್ಣಕಥೆಗಳನ್ನು ಅನುವಾದಿಸಿ ಪ್ರಕಟಿಸುತ್ತಾರೆ. ಆಧ್ಯಾತ್ಮಿಕ ಅನುವಾದಗಳನ್ನು ಮಾಡಿದ್ದಾರೆ. ಇವರು ರೂಪಾಂತರ ಮತ್ತು ಭಾವಾಂತರಗಳಿಗೆ ಹೆಚ್ಚಾಗಿ ಒತ್ತು ನೀಡಿರುವುದು ಕಂಡುಬರುತ್ತದೆ. ಸರಸ್ವತಿ ರಾಜವಾಡೆಯವರು ಹಿಂದಿ, ಮರಾಠಿ, ಅನುವಾದದಲ್ಲಿ ತೊಡಗಿದರು. ಎಚ್.ವಿ ಸಾವಿತ್ರಮ್ಮ ಅನ್ಯ ದೇಶೀಯ ಭಾಷೆಯ ಸಾಹಿತ್ಯವನ್ನು ದ್ವಿತೀಯ ಮೂಲದಿಂದ ಅನುವಾದಿಸುತ್ತಾರೆ. ಜೊತೆಗೆ ಕಾದಂಬರಿಯ ಅನುವಾದದಲ್ಲಿ ತೊಡಗಿದ್ದರು. ವಾಸಂತಿ ಪಡುಕೋಣೆಯವರು ಐದಕ್ಕೂ ಅಧಿಕ ಪ್ರಾದೇಶಿಕ ಭಾಷೆಗಳ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ವಾತಂತ್ರ್ಯಪೂರ್ವದ ಲೇಖಕಿಯರ ಅನುವಾದ ಪತ್ರಿಕೆಗಳ ಭಾಷಣ, ಲೇಖನಗಳ ಅನುವಾದ ಮೂಲಕ ಪ್ರಾರಂಭವಾಗಿ ಪ್ರಾದೇಶಿಕ ಭಿನ್ನ ಭಾಷೆಯ ಭಿನ್ನರೂಪಗಳ ಅನುವಾದದವರೆಗೆ ಮುಂದುವರೆಯುತ್ತದೆ. ಸ್ವಾತಂತ್ರ್ಯ ನಂತರ ಕಾಲ ಸಂದರ್ಭದಲ್ಲಿ ಅನುವಾದ ಕಾರ್ಯ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡುವುದರಿಂದ ಅನೇಕ ಹೊಸಗನ್ನಡ ಲೇಖಕಿಯರು ಅನುವಾದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅನುವಾದ ಕ್ಷೇತ್ರಕ್ಕೆ ಈ ಲೇಖಕಿಯರ ಕೊಡುಗೆ ಅಪಾರವಾಗಿದೆ.

## ಅಧ್ಯಾಯ – ೦೪. ಅನುವಾದಕಿಯರ ಜೀವನ ಮತ್ತು ಸಾಹಿತ್ಯ ಪರಿಚಯ

ಕನ್ನಡ ಅನುವಾದ ಕ್ಷೇತ್ರದಲ್ಲಿ ಅನುವಾದಕಿಯರು ತಮ್ಮದೇ ಆದ ದೀರ್ಘ ಇತಿಹಾಸವನ್ನು ಹೊಂದಿದ್ದಾರೆ. ಅನುವಾದ ಕ್ಷೇತ್ರದಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಈ ಕ್ಷೇತ್ರಕ್ಕೆ ಮೀಸಲಾಗಿರುವ ಅನುವಾದಕಿಯರ

ಜೀವನ ಮತ್ತು ಅವರ ಸಾಹಿತ್ಯ ಕೃಷಿಯ ಪರಿಚಯವನ್ನು ಮಾಡಿಕೊಡಲಾಗುವುದು. ಪ್ರಾರಂಭಿಕ ಅನುವಾದಕಿಯರೊಂದಿಗೆ ಹೊಸಗನ್ನಡದ ಪ್ರಮುಖ ಅನುವಾದಕಿಯರು ಎಚ್.ಎಸ್ ಶ್ರೀಮತಿ, ಪಾರ್ವತಿ ಐತಾಳ್, ಗೀತಾ ಶೆಣೈ, ಹೇಮಾ ಪಟ್ಟಣಶೆಟ್ಟಿ, ವಿಜಯಾ ಸುಬ್ಬರಾಜ್, ಸರಸ್ವತಿ ರಿಸಬೂಡ, ತೇಜಸ್ವಿನಿ ನಿರಂಜನ, ವಿಜಯಲಕ್ಷ್ಮಿ ಕೆ.ಎನ್, ಮಾಧವಿ ದೇಸಾಯಿ, ಪ್ರೇಮಾ ಭಟ್, ಉಷಾ ಎಮ್, ಸಂಧ್ಯಾ ರೆಡ್ಡಿ ಕೆ.ಎನ್, ಪೂರ್ಣಿಮಾ ಆರ್, ಮಮತ ಸಾಗರ ಇನ್ನೂ ಮುಂತಾದ ಅನುವಾದಕಿಯರ ಪರಿಚಯವನ್ನು ಮಾಡಿಕೊಡಲಾಗುವುದು.

## ಸಮಾರೋಪ

ದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಪ್ರಾರಂಭವಾಗುವುದೇ, ರೂಪಾಂತರ ಮತ್ತು ಭಾವಾಂತರಗಳ ಮೂಲಕ ಕನ್ನಡ ಮೊದಲ ಕೃತಿ ಕವಿರಾಜ ಮಾರ್ಗವೇ ಇದಕ್ಕೆ ನಿದರ್ಶನವಾಗಿದೆ. ಅದೇ ರೀತಿಯಾಗಿ ಮಹಿಳೆಯರ ಅನುವಾದ ಸಾಹಿತ್ಯ ಪ್ರಾರಂಭವಾಗುವುದು ಪತ್ರಿಕೆಗಳ ಭಾಷಣ ಮತ್ತು ಲೇಖನಗಳ ಭಾಷಾಂತರದ ಮೂಲಕ. ಹಾಗೆ ಪ್ರಾಂರಂಭವಾದ ಕಾರ್ಯ ಇಂದು ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಮತ್ತು ಜಾಗತಿಕ ಸಾಹಿತ್ಯವನ್ನು ಕನ್ನಡಕ್ಕೆ ಪರಿಚಯಿಸುವ ಮೂಲಕ ಅನುವಾದಕಿಯರು ಕನ್ನಡ ಅನುವಾದ ಕ್ಷೇತ್ರದಲ್ಲಿ ಸಮರ್ಥನಿಯವಾಗಿ ಕಾರ್ಯ ನಿರ್ವಹಿಸಿದ್ದಾರೆ. ಎಂಬುದನ್ನು ಈ ಮೇಲಿನ ಅಧ್ಯಾಯಗಳ ಮೂಲಕ ನಿರೂಪಿಸಲಾಗುತ್ತದೆ. ಕನ್ನಡ ಅನುವಾದ ಸಾಹಿತ್ಯ ಎಂಬ ಉದ್ದೇಶಿತ ಅಧ್ಯಯನವು ಮುಖ್ಯವಾಗಿ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ ಕುರಿತು ಮಾಡಬೇಕಾದ ಅಧ್ಯಯನವಾಗಿದೆ. ಲೇಖಕಿಯರ ಅನುವಾದ ಕಾರ್ಯದ ಭಾಗವಾಗಿ ಕಂಡುಬರುವ ಅಂಶವಾಗಿದೆ. ಅನುವಾದ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುವಾದಕಿಯರ ಪ್ರತ್ಯೇಕ ಸಾಹಿತ್ಯವನ್ನು ಕುರಿತು ಅಧ್ಯಯನ ಕೈಗೊಳ್ಳಬಹುದು. ಒಬ್ಬ ಅನುವಾದಕಿಯ ಅನುವಾದ ಸಾಹಿತ್ಯದ ಕುರಿತು ಪ್ರತ್ಯೇಕವಾಗಿ ಅಧ್ಯಾಯನವನ್ನು ಕೈಗೊಳ್ಳಬಹುದು. ಜೊತೆಗೆ ಒಂದು ಸಾಹಿತ್ಯ ರೂಪವನ್ನು ತೆಗೆದುಕೊಂಡು ಉದಾಹರಣೆಗೆ ನಾಟಕ, ಕಾದಂಬರಿ, ಈ ಕ್ಷೇತ್ರಗಳಲ್ಲೇ ಕೈಗೊಂಡ ಅನುವಾದ ಕಾರ್ಯದ ಕುರಿತು ಅಧ್ಯಾಯನ ಮಾಡಬಹುದು. ಜೊತೆಗೆ ನಿರ್ದಿಷ್ಟ ಭಾಷೆಯನ್ನು ತೆಗೆದುಕೊಂಡು ಆ ಭಾಷೆಯಲ್ಲೇ ನಡೆದಂತಹ ಅನುವಾದ ಕಾರ್ಯವನ್ನು ಕುರಿತು ಅಧ್ಯಯನ ಕೈಗೊಳ್ಳಬಹುದು. ಇವು ಮುಂದಿನ ಅಧ್ಯಾಯನದ ಸಾಧ್ಯತೆಗಳಾಗಿವೆ.

## ಗ್ರಂಥಋಣ

### ಅ) ಪರಾಮರ್ಶನ ಗ್ರಂಥಗಳು


೧. ಭಾಷಾಂತರ ಪ್ರವೇಶಿಕೆ–ಉಷಾ.ಎಂ
೨. ಭಾಷಾಂತರ ಕಲೆ–ಡಾ.ಪ್ರಧಾನ ಗುರುದತ್ತ
೩. ಅನುವಾದ ಕಲೆ–ಜಿ.ಎಸ್. ಕುಳ್ಳಿ ಮತ್ತು ಜಿ.ಪಿ ಮುರಡಿ
೪. ಭಾಷಾಂತರ–ಓ.ಎಲ್ ನಾಗಭೂಷಣಸ್ವಾಮಿ
೫. ವಸಾಹತುಶಾಹಿ ಮತ್ತು ಭಾಷಾಂತರ–ಸಂ.ವಿ.ವಿ ತಾರಕೇಶ್ವರ್
೬. ಅನಾವರಣ–ಡಾ. ಪ್ರಧಾನ ಗುರುದತ್ತ
೭. ಭಾಷಾಂತರ ಪ್ರಕ್ರಿಯೆ–ಡಾ.ಮೋಹನ ಕುಂಟಾರ್

೮. ಅನುವಾದ ಸಂವಾದ–ಸಂ. ಶ್ರೀಕಾಂತ ಬಾಬು

೯. ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ–ಡಾ. ಲತಾ ಗುತ್ತಿ

೧೦. ಅನುವಾದ ಆಧುನಿಕ ಜಗತ್ತಿನಲ್ಲಿ–ಡಾ. ಪ್ರಧಾನ ಗುರುದತ್ತ

೧೧. ಭಾಷಾಂತರದ ಸಾಂಸ್ಕೃತಿಕ ನೆಲೆಗಳು–ಡಾ. ಕರೀಗೌಡ ಬೀಚನಹಳ್ಳಿ

೧೨. ಭಾಷಾಂತರ ಮತ್ತು ಲಿಂಗರಾಜಕಾರಣ– ಉಷಾ ಎಂ.

**ಆ) ಆಕರ ಗ್ರಂಥಗಳು**

**೧.** ಮಹಾಶ್ವೇತಾದೇವಿ ಅವರ ಕಥಾ ಸಾಹಿತ್ಯ – ಎಚ್.ಎಸ್.ಶ್ರೀಮತಿ

**೨.**ಯುಗಾಂತರ – ಸರಸ್ವತಿ ರಿಸಬೂಡ

**೩.**ಹಿಂದಿ ಏಕಾಂಕ ನಾಟಕಗಳು – ಪ್ರೊ.ಜಯಲಕ್ಷ್ಮೀ.ಬಿ, ಪ್ರೊ. ಸೈಯದ್ ವನೇಂ ಅಫ್ರೋಸ್

ಡಾ. ನೀತ ಹಿರೇಮಠ

**೪.**ಉಲ್ಲಂಘನ – ಸ್ನೇಹಲತಾ ರೋಹಿಡೇಕರ್

ಮೂವರು ಅಕ್ಕತಂಗಿಯರು – ವೈದೇಹಿ